ಯುವವೇದಿಕೆ

# ವಿವೇಕಾನಂದರ ದೃಷ್ಟಿಯಲ್ಲಿ "ಯುವಶಕ್ತಿ-ರಾಷ್ಟ್ರನಿರ್ಮಾಣ"

ಯು.ಎಸ್. ಸಂಗನಾಳ ಮಠ

**"ರಾಷ್ಟ್ರಚೇತನ" ಎಂದು ಕರೆಯಲ್ಪಟ್ಟಿರುವ ವಿವೇಕಾನಂದರ ಚೈತನ್ಯಪೂರ್ಣ ನುಡಿಗಳು ಯುವಕರಲ್ಲಿ ರಾಷ್ಟ್ರೀಯತೆಯ ಕಿಚ್ಚನ್ನು ಕೆರಳಿಸುವಂತಾಗಬೇಕು ಎಂಬುದನ್ನು ನಿರೂಪಿಸಿರುವ ಶ್ರೀಸಂಗನಾಳ ಮಠ ಅವರು ಹೊನ್ನಾಳಿಯ ಸರ್ಕಾರಿ ಪದವಿ ಪೂರ್ವಕಾಲೇಜಿನಲ್ಲಿ ರಾಜನೀತಿಶಾಸ್ತ್ರದ ಉಪನ್ಯಾಸಕರಾಗಿರುವರು.**

ಒಮ್ಮೆ ಯುವಕನೊಬ್ಬ ವಿವೇಕಾನಂದರಲ್ಲಿಗೆ ಬಂದು ತಾನು ತುಂಬ ಭಕ್ತಿಯಿಂದ ಪೂಜೆತಪಗಳನ್ನು ಮಾಡುತ್ತಿದ್ದೇನೆಂದೂ ಆದರೂ ಮನಶ್ಶಾಂತಿ ದೊರಕುತ್ತಿಲ್ಲವೆಂದೂ ಹೇಳಿಕೊಂಡ. "ವಿದ್ವಾಂಸರೊಬ್ಬರ ಸಲಹೆಯಂತೆ ನಾನು ಪ್ರತಿದಿನ ಕೊಠಡಿಯ ಕಿಟಕಿ ಬಾಗಿಲುಗಳನ್ನೆಲ್ಲ ಮುಚ್ಚಿ ಧ್ಯಾನ ಮಾಡುತ್ತಿದ್ದೇನೆ. ಆದರೆ ಮನಸ್ಸಿಗೆ ಸ್ವಲ್ಪವೂ ಶಾಂತಿ ಸಮಾಧಾನ ದೊರಕುತ್ತಿಲ್ಲ" ಎಂದು ತನ್ನ ಅಳಲನ್ನು ತೋಡಿಕೊಂಡ.

ವಿವೇಕಾನಂದರು ಹೇಳಿದರು: "ನೀನು ಮೊದಲು ನಿನ್ನ ಕೊಠಡಿಯ ಕಿಟಕಿ ಬಾಗಿಲುಗಳನ್ನು ತೆರೆಯಬೇಕು. ಕಣ್ಣು ಮುಚ್ಚುವುದರ ಬದಲು ಕಣ್ಣು ತೆರೆದು ಸುತ್ತಲೂ ನೋಡಬೇಕು. ಆಗ ನೂರಾರು ಸಾವಿರಾರು ಅಸಹಾಯಕರು, ಬಡವರು, ದಲಿತರು ಕಾಣುತ್ತಾರೆ. ಅವರ ಸೇವೆ ಮಾಡು. ನೀನು ವಿದ್ಯಾವಂತ. ಅವರಿಗೆ ವಿದ್ಯೆ ಕೊಡು. ಅದರಿಂದ ನಿನಗೆ ಮನಶ್ಶಾಂತಿ ದೊರೆಯುತ್ತದೆ."

ವಿವೇಕಾನಂದರ ದೃಷ್ಟಿಯಲ್ಲಿ "ಚಾರಿತ್ರ್ಯ" ಎಂದರೆ ಮಾನವೀಯತೆ. ಮಾನವೀಯತೆ ಎಂದರೆ ದಲಿತರ ದುರ್ಬಲರ ಸೇವೆ. ಈ ಸೇವೆಯೇ ಮಹಾ ಪೂಜೆ. ಅದೇ ದೇವರು. ಗ್ರಾಮಗ್ರಾಮಕ್ಕೆ ಹೋಗಿ ನಿಷ್ಕಾಮವಾಗಿ ಸೇವೆ ಮಾಡಿ, ಅದೇ ಭಾರತದ ಉತ್ಕರ್ಷದ ದಾರಿ ಎಂದರು. ದಲಿತರಿಗೆ ಅಂತ್ಯಜರಿಗೆ ಶಿಕ್ಷಣ ನೀಡಿ ಅವರ ಅಳಿದುಹೋದ ವ್ಯಕ್ತಿತ್ವವನ್ನು ಅವರಿಗೆ ಮರಳಿ ಕೊಡಿ. ಜಗತ್ತಿನ ಎಲ್ಲ ಸಂಪತ್ತಿಗಿಂತಲೂ ಮಾನವೀಯ ಮೌಲ್ಯಗಳು ದೊಡ್ಡವು ಎಂದು ಹೇಳಿದರು. ಹೀಗೆ ವಿವೇಕಾನಂದರ ದೃಷ್ಟಿಯಲ್ಲಿ ಮಾನವೀಯ ಮೌಲ್ಯಗಳೆಂದರೆ ದಯೆ, ಸೇವೆ, ತ್ಯಾಗ, ಅನುಕಂಪ, ಸತ್ಯ, ಶ್ರದ್ಧೆ, ಪರಿಶ್ರಮ ಮತ್ತು ಸಮಾನಭಾವ.

ಪ್ರತಿಯೊಬ್ಬರೂ ಶ್ರಮಪಟ್ಟು ತಮ್ಮ ತಮ್ಮ ಕಾರ್ಯಗಳನ್ನು ಮಾಡಿಕೊಂಡು ಪರಾವಲಂಬಿಯಾಗದಿರುವುದೇ ನಿಜವಾದ ಜೀವನಧರ್ಮ. ಅವರ ಪ್ರಕಾರ "ಕೆಲವೇ ಶ್ರದ್ಧಾವಂತ ಜನರು ಒಂದು ವರ್ಷದಲ್ಲಿ ಮಾಡುವ ಸಾಧನೆಯನ್ನು ಒಂದು ದೊಡ್ಡ ಜನಸಮುದಾಯ ಒಂದು ಶತಮಾನದಲ್ಲೂ ಮಾಡಲಾರದು."

ಭಾರತೀಯರಲ್ಲಿ ಒಳ್ಳೆಯ ಭಾವನೆಗಳನ್ನು ಹೊಂದಿದ ಹೃದಯವಿದೆ. ಶುದ್ಧ ಮುಂದಾಲೋಚನೆಯ ವಿಚಾರಕ್ಕಾಗಿ ಮೆದುಳು ಇದೆ. ಕೆಲಸಕ್ಕಾಗಿ ಬಲಿಷ್ಠ ಕೈಗಳಿವೆ. ಹೀಗೆ ಇದ್ದಾಗ ಬಡತನ ಎಲ್ಲಿಯದು? ಎಂಬ ಪ್ರಶ್ನೆ ಅವರದು.

ಅದಕ್ಕಾಗಿ ರಾಷ್ಟ್ರನಿರ್ಮಾಣಕ್ಕೆ ತ್ಯಾಗ, ಬಲಿದಾನ, ಕರ್ತೃತ್ವ ಶಕ್ತಿ, ನಿಸ್ವಾರ್ಥ ಸೇವೆ ಮುಖ್ಯ. ಮತಾಂಧತೆ, ರಕ್ತಪಾತ ಮತ್ತು ಕ್ರೌರ್ಯದಿಂದ ಯಾವ ನಾಗರಿಕತೆಯೂ ಬೆಳೆಯಲಾರದು. ಇತರರಿಗೆ ಒಳ್ಳೆಯದನ್ನು ಮಾಡುವುದೇ ನಿಜವಾದ ಧರ್ಮ ಎಂದು ಸಾರಿದ ವಿವೇಕಾನಂದರು ಪ್ರೀತಿ ವಿಶ್ವಾಸ ಸಾಮರಸ್ಯ ಸಹಿಷ್ಣುತೆ ಔದಾರ್ಯ ಇವು ಎಲ್ಲ ಧರ್ಮಗಳ ತತ್ವಗಳು ಎಂದು ಹೇಳಿದ್ದಾರೆ.

ಭಾರತದ ಪುನರುಜ್ಜೀವನಕ್ಕೆ ಸ್ವಾಮೀಜಿ ಹಮ್ಮಿಕೊಂಡಿದ್ದ ಯೋಜನೆಗೆ ಹಲವು ಹಂತಗಳಿದ್ದವು. ಮೊದಲನೆಯದಾಗಿ ಹಿಂದೂ ಮನಸ್ಸಿನಲ್ಲಿ ಆಳವಾಗಿ ಬೇರೂರಿದ್ದ ಆತ್ಮಹೀನತೆಯನ್ನು ಸಂಪೂರ್ಣವಾಗಿ ತೊಡೆದುಹಾಕಿ ಹಿಂದೂ ಶ್ರೇಷ್ಠತೆಯನ್ನು ವ್ಯಕ್ತಪಡಿಸುವುದು. ಎರಡನೆಯದಾಗಿ, ಭಾರತೀಯರು ತಮ್ಮ ಕೀಳರಿಮೆಯನ್ನು ಬಿಟ್ಟು ಆತ್ಮವಿಶ್ವಾಸದಿಂದ ಮೇಲೇಳುವುದು. ಅದಕ್ಕಾಗಿ ವಿವೇಕಾನಂದರು ವಿದೇಶಗಳಲ್ಲಿ ಹಿಂದೂ ಸ್ವಾಭಿಮಾನವನ್ನು ಎತ್ತಿ ಹಿಡಿದು, ಭಾರತದಲ್ಲಿ, ಹಿಂದೂ ಸಮಾಜದಲ್ಲಿ ತುಂಬಿಕೊಂಡಿರುವ ವೈಷಮ್ಯ, ಅಸೂಯೆ, ಮತ್ಸರ, ಮೂಢನಂಬಿಕೆ, ಮಡಿವಂತಿಕೆ, ಅಸ್ಪೃಶ್ಯತೆ ಇತ್ಯಾದಿ ವಿವಿಧ ದೋಷಗಳನ್ನೂ ಕಟುವಾದ ಭಾಷೆಯಲ್ಲಿ ಟೀಕಿಸಿದರು. ಹಿಂದೂಸಮಾಜದ ಸಂಘಟನೆಯ ಹಂತ ಹಂತದ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ದೇಶದ ಯುವಶಕ್ತಿ ತನ್ನೊಂದಿಗೆ ಭುಜಗೂಡಿಸುವುದೆಂಬ ಭರವಸೆ ಸ್ವಾಮೀಜಿಯವರಿಗೆ ಇದ್ದಿತು. ಅವರು "ನನ್ನ ನಂಬಿಕೆ ತರುಣ

ಪೀಳಿಗೆಯಲ್ಲಿದೆ. ಈ ಎಲ್ಲ ಸಮಸ್ಯೆಗಳನ್ನು ಅವರು ಸಿಂಹ ಪರಾಕ್ರಮದಿಂದ ಎದುರಿಸಿಯಾರು. ಪ್ರತಿ ಆತ್ಮದಲ್ಲಿ ಅನಂತ ಶಕ್ತಿ ಅಡಗಿದೆ ಎಂಬ ಶ್ರದ್ಧೆ ನಿಮ್ಮಲ್ಲಿ ಪ್ರತಿಯೊಬ್ಬನಲ್ಲಿ ಉಕ್ಕೇರಲಿ. ಆಗ ಇಡೀ ಭಾರತವನ್ನು ಚೈತನ್ಯಗೊಳಿಸಬಲ್ಲಿರಿ" ಎಂದು ಕರೆ ಇತ್ತರು.

"ಹಿಂತಿರುಗಿ ನೋಡಬೇಡಿ. ಯಾವಾಗಲೂ ಮುನ್ನಡೆಯಿರಿ. ಅನಂತಶಕ್ತಿ, ಅನಂತ ಉತ್ಸಾಹ, ಅನಂತ ಸಾಹಸ ಮತ್ತು ಅನಂತ ತಾಳ್ಮೆ ಇವುಗಳಿದ್ದರೆ ಮಾತ್ರ ಮಹತ್ಕಾರ್ಯಗಳನ್ನು ಸಾಧಿಸಲು ಸಾಧ್ಯ" ಮತ್ತು "ನಿಮ್ಮೊಳಗಿರುವುದನ್ನು ಪ್ರಯತ್ನಪೂರ್ವಕವಾಗಿ ಹೊರಹೊಮ್ಮಿಸಿ. ಆದರೆ ಅನುಕರಿಸಬೇಡಿ. ಇತರರಿಂದ ಒಳ್ಳೆಯದೆಲ್ಲವನ್ನೂ ಸ್ವೀಕರಿಸಿ" ಎಂದು ಯುವಕರಿಗೆ ವಿವೇಕಾನಂದರು ಹೇಳಿದ್ದಾರೆ. "ಅನುಕರಣೆ ಎಂದಿಗೂ ಪ್ರಗತಿಯ ಗುರುತಲ್ಲ. ಅದೊಂದು ಹೀನ ಅವನತಿಯ ಚಿಹ್ನೆ" ಎನ್ನುವುದು ಕಿವಿಮಾತು.

ಆದರೆ ಈಗ ಬಹುಸಂಖ್ಯೆಯ ಯುವಕರು ಗುರಿಯಿಲ್ಲದವರು ಚಾರಿತ್ರ್ಯಹೀನರು ಆಗಿದ್ದಾರೆ. ಯುವಕರು ಗುಟ್ಕಾ ಸಂಸ್ಕೃತಿ ಮತ್ತು ಪಾಶ್ಚಾತ್ಯ ಪ್ರಭಾವಗಳಿಗೆ ಬಲಿ ಬಿದ್ದಿದ್ದಾರೆ. ಬುದ್ಧ, ಬಸವಣ್ಣ, ಗಾಂಧಿ, ರಾಮಕೃಷ್ಣರ ಉಪದೇಶಗಳಿಗೆ ವ್ಯತಿರಿಕ್ತವಾಗಿ ಬಾಳುವುದೇ ಇಂದಿನ ಧರ್ಮವಾಗಿದೆ. ಎಲ್ಲ ಕ್ಷೇತ್ರಗಳಲ್ಲಿ ಸ್ವಾರ್ಥ, ಮತ್ಸರ, ವಂಚನೆ, ಧನಪಿಪಾಸುಗಳ ಲಂಚಕೋರತನ ತಾಂಡವವಾಡತೊಡಗಿದೆ. ನೀತಿರಹಿತ ರಾಜಕೀಯ ಒಂದು ಪಾಪ ಎಂದ ಗಾಂಧೀಜಿಯವರ ತತ್ತ್ವವು ಮೌಲ್ಯತೆ ಕಳೆದುಕೊಂಡು ರಾಜಕೀಯದಲ್ಲಿ ನೈತಿಕತೆ ಇಲ್ಲ ದಿರುವುದೇ ಈಗಿನ ತತ್ತ್ವವಾಗಿದೆ.

ವಿದೇಶದ ಮಣ್ಣಿನಲ್ಲಿ ಸ್ವಾಮೀಜಿ, "ನನ್ನ ಸಹೋದರರೇ ಮತ್ತು ಸಹೋದರಿಯರೇ" ಎಂಬ ಸಿಂಹಧ್ವನಿಯಿಂದ ಸಭಿಕರ ಹೃದಯ ಸ್ಪಂದನ ಮಾಡಿದಂತೆ ನಮ್ಮ ದೇಶದ ಜನರಲ್ಲಿ ಸಂವಿಧಾನ ಬದ್ಧವಾಗಿ ಸಮಾನತೆ, ಸಹೋದರತ್ವದ, ಭಾವನೆಗಳು ಭಾವನಾತ್ಮಕವಾಗಿ ಮೂಡಿ ಎಲ್ಲ ಕ್ಷೇತ್ರಗಳಲ್ಲಿ ಕಾರ್ಯರೂಪಕ್ಕಿಳಿದಾಗ ಮಾತ್ರ ರಾಷ್ಟ್ರನಿರ್ಮಾಣ ಸಾಧ್ಯ. ಇದಕ್ಕೆ ಪೂರಕವಾಗಿ ಎಲ್ಲರಲ್ಲಿಯೂ ಕರ್ತೃತ್ವಶಕ್ತಿ, ಸೃಜನಾತ್ಮಕತೆ, ಸ್ಥೈರ್ಯ, ಕರ್ತವ್ಯ ಪ್ರಜ್ಞೆ ತನ್ನಿಂದ ತಾನೇ ಸ್ವಯಂಪೂರ್ಣವಾಗಿ ಮೂಡಿದಾಗಲೇ ವಿವೇಕಾನಂದರ ಕನಸಿನ ರಾಷ್ಟ್ರನಿರ್ಮಾಣ ಸಾಧ್ಯ.

## ಯಶಸ್ಸಿನ ಗುಟ್ಟು

- ಸದವಕಾಶ ಬಂದಾಗ ಅದರ ಪ್ರಯೋಜನ ಪಡೆಯಲು ವ್ಯಕ್ತಿಯು ಸದಾ ಸಿದ್ಧನಾಗಿರಬೇಕು.
- ಯಶಸ್ಸನ್ನು ಪಡೆಯಲು ಮೂರು ನಿಯಮಗಳಿವೆ: ಮೊದಲನೆಯದು ಮುನ್ನಡೆಯಿರಿ, ಎರಡನೆಯದು, ನಡೆ ಮುಂದಕ್ಕೆ ಮತ್ತು ಮೂರನೆಯದು, ಸದಾ ಮುಂದೆ ಮುಂದೆ.
- ಅಂಚೆ ಚೀಟಿಯನ್ನು ನೋಡಿ. ಅದು ಗುರಿ ಮುಟ್ಟುವವರೆಗೂ ಒಂದಕ್ಕೇ ಅಂಟಿಕೊಂಡಿರುತ್ತದೆ.
- ನಾನು ಯುವಕನಾಗಿದ್ದಾಗ ನಾನು ಮಾಡಿದ ಹತ್ತರಲ್ಲಿ ಒಂಬತ್ತು ವಿಫಲವಾಗಿದ್ದವು. ನನಗೆ ವಿಫಲನಾಗಲು ಇಷ್ಟವಿರಲಿಲ್ಲ. ನಾನು ಹತ್ತು ಪಟ್ಟು ಕೆಲಸಮಾಡಿದೆ.
- ಸರಿಯಾದ ಪ್ರಯತ್ನ ಮಾಡದೆ ಏನನ್ನೂ ಸಾಧಿಸಲಾಗುವುದಿಲ್ಲ.
- ಅದ್ಭುತ ಪ್ರತಿಭೆಯಲ್ಲಿ ಒಂದು ಭಾಗ ಸ್ಫೂರ್ತಿ ಮತ್ತು ತೊಂಬತ್ತೊಂಬತ್ತು ಭಾಗ ಪರಿಶ್ರಮವಿರುತ್ತದೆ.
- ಹೆಚ್ಚು ಹೆಚ್ಚು ತೊಂದರೆಗಳನ್ನು ಎದುರಿಸುವುದರಿಂದಲೇ ನಮ್ಮ ಮಹತ್ವ ಹೆಚ್ಚುತ್ತದೆ. ಬಿರುಗಾಳಿ ಸುಂಟರಗಾಳಿಗಳ ಮೂಲಕವೆ ಕುಶಲ ನಾವಿಕರು ಪ್ರಸಿದ್ಧಿಯನ್ನು ಪಡೆಯುತ್ತಾರೆ.
- ಒಂದು ತಿಂಗಳ ಪುಸ್ತಕಾಧ್ಯಯನಕ್ಕಿಂತ ಜ್ಞಾನಿಯೊಡನೆ ಸ್ವಲ್ಪ ಹೊತ್ತಿನ ಸಂಭಾಷಣೆ ಎಷ್ಟೋ ಲಾಭದಾಯಕ.
- ಎಂದೆಂದಿಗೂ ನೀವು ಜೀವಿಸುವಿರೋ ಎನ್ನುವಂತೆ ಅಧ್ಯಯನ ಮಾಡಿ.
- ನಾಳೆಯೇ ಸಾಯುವಿರೊ ಎನ್ನುವಂತೆ ಜೀವಿಸಿ.

(*How to Develop Your Personality and Potentiality* -ಎಂಬ ಪುಸ್ತಕದಿಂದ ಸಂಗ್ರಹ.)